<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು</u>

<u>ಇವರ ನ್ಯಾಯಾಲಯದಲ್ಲಿ</u>

**MVC** : 449/2023

**Rw** – 1

| | | |
|---|---|---|
| ಸಾಕ್ಷಿಯ ಹೆಸರು | : | ಮನೋಜ್ ಕುಮಾರ್ ಎಂ ವಿ |
| ತಂದೆ ಹೆಸರು | : | ಎಂ ಎಸ್ ವೆಂಕಟೇಶ್ |
| ವಯಸ್ಸು | : | **26** ವರ್ಷ |
| ಉದ್ಯೋಗ | : | ಲೀಗಲ್ ಎಕ್ಸಿಗ್ಯುಟಿವ್ |
| ವಾಸ | : | ಬೆಂಗಳೂರು |

<u>ಸಾಕ್ಷಿಯನ್ನು ದಿಃ **14.05.2026** ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.</u>

<u>**ಮುಖ್ಯ ವಿಚಾರಣೆ** : **4 ನೇ ಎದುರುದಾರರ ಪರ ಶ್ರೀ ಬಿ ಎಂ ಆರ್ ಸಿ ವಕೀಲರಿಂದಃ**</u>

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಆಥರೈಸೇಷನ್ ಲೆಟರನ್ನು ನಿಆರ್-1 ಎಂದು ಗುರುತಿಸಲಾಯಿತು. ಪಾಲಿಸಿಯನ್ನು ನಿಆರ್-2 ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ ವಿ ವಕೀಲರಿಂದಃ**</u>

ವಾಹನ ನಂ. ಕೆಎ 06 ಹೆಚ್ ಸಿ 9939 ವಾನಹಕ್ಕೆ ವಿಮೆ ಮಾಡಿಸಿರುತ್ತಾರೆ. ಅರ್ಜಿದಾರರಿಗೆ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಮೆ ಷರತ್ತು ಮತ್ತು ಕ್ರಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾಹನ ಚಾಲನೆ ಮಾಡಲು ಚಾಲಕನಿಗೆ ಡಿ ಎಲ್ ಇರುವುದರಿಂದ ಮತ್ತು ಆರ್ ಸಿ , ಇರುವುದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ವಾಹನ ನಂ. ಕೆಎ 06 ಹೆಚ್ ಸಿ 9939 ನ್ನು ಚಾಲಾನೆ ಮಾಡಿದ ಚಾಲಕನಿಗೆ ಚಾಲನಾ ಪರವಾನಿಗೆ ಇಲ್ಲ ಎಂದು ತೋರಿಸಲು ಯಾವುದೇ

ದಾಖಲೆಗಳು ನಿಮ್ಮ ಬಳಿ ಇಲ್ಲ ಎಂದರೆ ಸಾಕ್ಷಿ ನಮ್ಮ ಕಂಪನಿಯಿಂದ ತನಿಖೆ ಮಾಡಿಸಿರುತ್ತೇವೆ ಮತ್ತು ದೋಷಾರೋಪಣಾ ಪಟ್ಟಿ ಯಲ್ಲಿ ಚಾಲನಾ ಪರವಾನಿಗೆ ಇಲ್ಲವೆಂದು ದೋಷಾರೋಪಣೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಲು ನಾವು ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ಲಾರಿ ಮತ್ತು ಮೋಟರ್ ಸೈಕಲ್ ಚಾಲಕರ ಮೇಲೆ ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನಿಜ. ಲಾರಿ ಚಾಲಕನಿಗೆ ಡಿ ಎಲ್ ಇಲ್ಲ ಎನ್ನುವ ಬಗ್ಗೆ ಸೆಕ್ಷನ್ ಹಾಕಿಲ್ಲ ಎಂದರೆ ನಿಜ. ಲಾರಿ ಚಾಲಕನ ತಪ್ಪಿನಿಂದ ಮಾತ್ರ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು